MAY 26, 2025

AKASHAVANI - DHARWAD

PRADESH SAMACHARA (KANNADA) 07.05 A.M.

<><><>

ಆಕಾಶವಾಣಿ

ಪ್ರದೇಶ ಸಮಾಚಾರ

<><><>

ಮುಖ್ಯಾಂಶಗಳು

<><><>

- ಮನ್ ಕಿ ಬಾತ್; ಜೇನು ಕೃಷಿಯಿಂದ, 'ಆತ್ಮನಿರ್ಭರ ಭಾರತ' ಪರಿಕಲ್ಪನೆ ಸಾಕಾರ, – ಪ್ರಧಾನಮಂತ್ರಿ ನರೇಂದ್ರ ಮೋದಿ, ಆಶಯ.
- ರಾಜ್ಯಾದ್ಯಂತ, ಮುಂಗಾರು ಚುರುಕು; ಡಿ.ಎ.ಪಿ. ಬದಲಿಗೆ, ಸಂಯುಕ್ತ ರಸಗೊಬ್ಬರ ಬಳಸಲು, ರೈತರಿಗೆ ಕೃಷಿ ಇಲಾಖೆ, ಸೂಚನೆ.
- ಬೆಂಗಳೂರಿನ ಹೆಬ್ಬಾಳದಲ್ಲಿ, ಶೀಘ್ರ, ಸಾವಯವ ಮತ್ತು ಸಿರಿಧಾನ್ಯ ಹಬ್ ಸ್ಥಾಪನೆ.
- ಉಪ ಲೋಕಾಯುಕ್ತ ಬಿ.ವೀರಪ್ಪ, ಇಂದಿನಿಂದ 29ರ ವರೆಗೆ, ಮಂಡ್ಯ ಜಿಲ್ಲೆ ಪ್ರವಾಸ.

<><><>

ಈಗ ವಾರ್ತೆಗಳ ವಿವರ

<><><>

'ಜೇನು ಕೃಷಿ', ಸ್ವಾವಲಂಬನೆ ಹಾಗೂ ಆತ್ಮನಿರ್ಭರ ಭಾರತದ ಪರಿಕಲ್ಪನೆಯನ್ನು, ಸಾಕಾರಗೊಳಿಸಬಲ್ಲದು ಎಂದು, ಪ್ರಧಾನಮಂತ್ರಿ ನರೇಂದ್ರ ಮೋದಿ, ಹೇಳಿದ್ದಾರೆ.

ಆಕಾಶವಾಣಿಯ ಜನಪ್ರಿಯ, 'ಮನ್ ಕಿ ಬಾತ್' ಸರಣಿಯ, 122ನೇ ಆವೃತ್ತಿಯಲ್ಲಿ, ದೇಶ ಬಾಂಧವರೊಂದಿಗೆ ಅವರು, ತಮ್ಮ ಅನಿಸಿಕೆ ಹಂಚಿಕೊಂಡರು.

<><><>

1. ಪ್ರಧಾನಮಂತ್ರಿ ಮೋದಿ (ಜೇನು ಕೃಷಿ), ಧ್ವನಿ 50 ಸೆಕೆಂದುಗಳು

<><><>

ದೇಶಾದ್ಯಂತ ಕೃತಕ ಬುದ್ಧಿಮತ್ತೆ ಆಧರಿತ, ಜೇನುತುಪ್ಪ ಪರಿಶುದ್ಧತೆ ಪರೀಕ್ಷಿಸುವ ಪ್ರಯೋಗಾಲಯ ಹಾಗೂ ನವೋದ್ಯಮಗಳು ಕಾರ್ಯಾರಂಭಿಸಿದ್ದು, ಜೇನು ಮಿತ್ರರ ಕೊಡುಗೆ ಮನನೀಯ ಎಂದು, ಪ್ರಧಾನಮಂತ್ರಿ ನರೇಂದ್ರ ಮೋದಿ ಶ್ಲಾಘಿಸಿದರು.

<><><>

2. ಪ್ರಧಾನಮಂತ್ರಿ ಮೋದಿ (ಜೇನು ಏ.ಐ., ಸ್ಟಾರ್ಟ್ ಅಪ್), ಧ್ವನಿ 50 ಸೆಕೆಂದುಗಳು

<><><>

ಸ್ವಾತಂತ್ರ್ಯ ಪೂರ್ವದಲ್ಲಿ, 1938ರ ಹೊತ್ತಿಗೆ ಸ್ಥಾಪನೆಗೊಂಡ, ದಕ್ಷಿಣಕನ್ನಡ ಜಿಲ್ಲೆ ಜೇನು ವ್ಯವಸಾಯಗಾರರ ಸಹಕಾರಿ ಸಂಘ, ಜೇನು ಕೃಷಿ ಹಾಗೂ ಜೇನುತುಪ್ಪದ ಮೌಲ್ಯವರ್ಧಿತ ಉತ್ಪನ್ನಗಳನ್ನು ಪ್ರಚುರಪಡಿಸುವಲ್ಲಿ, ಮಹತ್ವದ ಪಾತ್ರ ವಹಿಸಿದೆ.

ಈ ಕುರಿತು ಒಂದು ವರದಿ..

ಕೃಷಿ ಹಾಗೂ ತೋಟಗಾರಿಕೆ ಬೆಳೆಗಳ ಇಳುವರಿ, ಮೌಲ್ಯವರ್ಧನೆ ಹಾಗೂ ಗುಣಮಟ್ಟ ಖಾತ್ರಿಪಡಿಸುವಲ್ಲಿ, ಜೇನು ದುಂಬಿಗಳ ಪರೋಕ್ಷ ಪರಾಗಸ್ಪರ್ಷ ಮಹತ್ತರವಾದುದು. ಕೃಷಿ ಆದಾಯದೊಟ್ಟಿಗೆ, ಕೃಷಿಕರಿಗೆ ಪರ್ಯಾಯ ಆದಾಯ ಮೂಲವಾಗಿ ಜೇನು ಕೃಷಿ ಕೈಹಿಡಿದಿದೆ.

ಕೊಡಗು ಜಿಲ್ಲೆ, ಮಡಿಕೇರಿ ತಾಲೂಕು, ಯಾವಕಪಾಡಿಯ ಶ್ರೀಮತಿ ಸುಶೀಲಾ ಹಾಗೂ ಸುರೇಶ ಚೆಂಗಪ್ಪ ಅವರ, ಇಡೀ ದೇಶದಲ್ಲಿಯೇ ಅತೀ ದೊಡ್ಡ, 'ಹನಿ ವ್ಯಾಲಿ' ಪ್ರಯೋಗ ಗಮನ ಸೆಳೆದಿದ್ದು, ವಿಶೇಷ.

ದಕ್ಷಿಣಕನ್ನಡ ಜಿಲ್ಲೆಯ ಜೇನು ವ್ಯವಸಾಯಗಾರರ ಸಹಕಾರಿ ಸಂಘ, ಜೇನುತುಪ್ಪದ ಮೌಲ್ಯವರ್ಧಿತ ಉತ್ಪನ್ನವಾಗಿ, 'ಹನಿ ಬೈಟ್' ಹಾಗೂ 'ಹನಿ ಪೆಪ್ಪರ್ ಬೈಟ್' ಎಂಬ, 2 ವಿಧದ ಜೇನು ಚಾಕೋಲೇಟ್‌ಗಳನ್ನು ಮಾರುಕಟ್ಟೆಗೆ ಪರಿಚಯಿಸಿದೆ.

ಇತ್ತೀಚೆಗೆ ಕೇಂದ್ರದ ಸೂಕ್ಷ್ಮ ಹಾಗೂ ಮಧ್ಯಮ ಕೈಗಾರಿಕೆ ಖಾತೆ ರಾಜ್ಯ ಸಚಿವರಾದ ಶೋಭಾ ಕರಂದ್ಲಾಜೆ, ಸುಳ್ಯದಲ್ಲಿ ಜೇನು ಚಾಕೋಲೇಟ್ ಬಿಡುಗಡೆ ಮಾಡಿದರು.

ಈ ಕುರಿತು, ಪ್ರದೇಶ ಸಮಾಚಾರಕ್ಕಾಗಿ, ಮಾಹಿತಿ ನೀಡಿದ್ದಾರೆ, ಜೇನು ವ್ಯವಸಾಯಗಾರರ ಸಹಕಾರಿ ಸಂಘದ ಅಧ್ಯಕ್ಷ, ಸುಳ್ಯ ಚಂದ್ರ ಕೋಲ್ಚಾರ.

<><><>

3. ವಿವೇಕ ಧ್ವನಿ (50) + ಚಂದ್ರ ಕೋಲ್ಚಾರ ಧ್ವನಿ (48) ಸೆಕೆಂದುಗಳು

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಆಕಾಶವಾಣಿ ಸುದ್ದಿಗಳಿಗಾಗಿ, ನಮ್ಮ X ಖಾತೆ @airnews_dharwad ಹಾಗೂ

ನಮ್ಮ ಫೇಸ್ಬುಕ್ ಖಾತೆ Airrnu Dharwad ಅನುಸರಿಸಿ.

<><><>

ರಾಜ್ಯಾದ್ಯಂತ, ಮುಂಗಾರು ಕೃಷಿ ಚಟುವಟಿಕೆ ಗರಿಗೆದರಿದ್ದು, ಭೂಮಿ ಹದ ಮಾಡುವ ಕಾಯಕದಲ್ಲಿ, ರೈತರು ತೊಡಗಿದ್ದಾರೆ. ಕೃಷಿಕರು, ಡಿ.ಎ.ಪಿ. ರಸ ಗೊಬ್ಬರದ ಬದಲಿಗೆ, ಸಂಯುಕ್ತ ರಸಗೊಬ್ಬರ ಬಳಸುವಂತೆ, ಕೃಷಿ ಇಲಾಖೆ, ಮಾರ್ಗಸೂಚಿ ಹೊರಡಿಸಿದೆ. ಸಸ್ಯಗಳ ಬೆಳವಣಿಗೆಗೆ, 17 ಪೋ ಕಾಂಶಗಳ ಅಗತ್ಯವಿದೆ. ಆ ಪೈಕಿ, ಗಾಳಿ ಮತ್ತು ನೀರಿನ ಮೂಲಕ, ಇಂಗಾಲ, ಜಲಜನಕ ಮತ್ತು ಆಮ್ಲಜನಕ ಸ್ವಾಭಾವಿಕವಾಗಿ ದೊರೆಯುತ್ತದೆ. ಉಳಿದ 14 ಪೋ ಕಾಂಶಗಳಿಗೆ, ಸಂಯುಕ್ತ ರಸಗೊಬ್ಬರ ಬಳಸುವಂತೆ, ಸಲಹೆ ನೀಡಲಾಗಿದೆ.

ಸಂಯುಕ್ತ ರಸಗೊಬ್ಬರಗಳನ್ನು ಬಳಸುವುದರಿಂದ, ಬಿತ್ತಿದ ಬೀಜ, ಮೊಳಕೆಯೊಡೆದ ಸಸಿಗಳಿಗೆ ಅವಶ್ಯವಿರುವ, ಪೊಟ್ಯಾಷ್ ಪೋಷಕಾಂಶ ಲಭ್ಯವಾಗಿ, ಸಸಿಗಳಲ್ಲಿ ಕಿಣ್ವಗಳನ್ನು ಸಕ್ರಿಯಗೊಳಿಸಿ, ನೀರು ಮತ್ತು ಪೋಷಕಾಂಶಗಳ ಸಾಗಣೆಗೆ ಸಹಾಯ, ಬರ ಪರಿಸ್ಥಿತಿಯಲ್ಲಿ ಜೀವದಾಯಿ, ಉತ್ಪಾದಕತೆ ಮತ್ತು ಗುಣಮಟ್ಟ ಸುಧಾರಿಸಲು ಸಹಕಾರಿ ಎಂದು, ಕೃಷಿ ಇಲಾಖೆ, ತಿಳಿಸಿದೆ.

<><><>

ರಾಜ್ಯದ ಸಾವಯವ ಮತ್ತು ಸಿರಿಧಾನ್ಯ ಉತ್ಪಾದಕರಿಗೆ, ಮಾರುಕಟ್ಟೆದಾರರಿಗೆ ಹಾಗೂ ಗ್ರಾಹಕರಿಗೆ ಅನುಕೂಲವಾಗುವಂತೆ, ಸಾವಯವ ಮತ್ತು ಸಿರಿಧಾನ್ಯ ಹಬ್‌ಅನ್ನು ಬೆಂಗಳೂರಿನ ಹೆಬ್ಬಾಳದಲ್ಲಿ ಸ್ಥಾಪಿಸಲಾಗುತ್ತಿದೆ. ಸಿರಿಧಾನ್ಯಗಳಿಗೆ ಒತ್ತು ನೀಡಿ, 2017 ರಲ್ಲಿ, ಪರಿಷ್ಕೃತ ಸಾವಯವ ನೀತಿಯನ್ನು ಜಾರಿಗೊಳಿಸಿದ್ದು, ಸಾಂಪ್ರದಾಯಿಕ ಮತ್ತು ಸಾವಯವ ಸಿರಿಧಾನ್ಯಗಳನ್ನು, "ಪ್ರಜ್ಞಾವಂತ ಆಹಾರ"ವನ್ನಾಗಿ ಉತ್ತೇಜಿಸಲಾಗುತ್ತಿದೆ. ರಾಜ್ಯದ ಎಲ್ಲ ಸರ್ಕಾರಿ ಕಚೇರಿಗಳಲ್ಲಿ ಆಯೋಜಿಸುವ, ಸಭೆ ಸಮಾರಂಭಗಳಲ್ಲಿ, ಸಾವಯವ ಮತ್ತು ಸಿರಿಧಾನ್ಯಗಳಿಂದ ತಯಾರಿಸಲಾದ, ತಿಂಡಿ, ತಿನಿಸುಗಳನ್ನು ಬಳಸುವಂತೆ, ಸೂಚಿಸಲಾಗಿದೆ.

<><><>

ದಕ್ಷಿಣಕನ್ನಡ ಜಿಲ್ಲೆ ಸೇರಿದಂತೆ, ರಾಜ್ಯದ ಕರಾವಳಿಗೆ ಈ ಬಾರಿ, ವಾಡಿಕೆಗಿಂತ ಮುನ್ನವೇ, ಮುಂಗಾರು ಪ್ರವೇಶವಾಗಿದೆ. ಹಲವೆಡೆ ಧಾರಾಕಾರ ಮಳೆಯಾಗುತ್ತಿದೆ.

ಸತತವಾಗಿ ಮಳೆ ಹಿನ್ನೆಲೆ, ಜಿಲ್ಲೆಯ ನೇತ್ರಾವತಿ, ಕುಮಾರಧಾರಾ, ಫಲ್ಗುಣಿ ನದಿಗಳು ಮೈದುಂಬಿ ಹರಿಯುತ್ತಿವೆ.

<><><>

ಚಿಕ್ಕಮಗಳೂರು, ಮೂಡಿಗೆರೆ, ಕೊಟ್ಟಿಗೆಹಾರ, ಕೊಪ್ಪ, ಕಳಸ, ಹೊರನಾಡು, ಶೃಂಗೇರಿ, ಕಲ್ಲತಗಿರಿ ಸೇರಿದಂತೆ, ಹಲವೆಡೆ ವ್ಯಾಪಕ ಮಳೆಯಾಗುತ್ತಿದೆ. ಕೊಪ್ಪ ತಾಲೂಕಿನ ಕೊಗ್ರೆ ಗ್ರಾಮದ ಸಮೀಪ, ಆಟೋ ರಿಕ್ಷಾದ ಮೇಲೆ ಬೃಹತ್ ಮರ ಉರುಳಿಬಿದ್ದು, ಚಾಲಕ ರತ್ನಾಕರ್ ಮೃತಪಟ್ಟಿದ್ದಾರೆ. ಮೂಡಿಗೆರೆ ತಾಲೂಕಿನ, ಹೇಮಾವತಿ ಉಪ ನದಿಗೆ, 2 ಕಾರುಗಳು ಉರುಳಿಬಿದ್ದಿದ್ದು, ಕಾರಿನಲ್ಲಿದವರನ್ನು ರಕ್ಷಿಸಲಾಗಿದೆ. ಇನಾಂ ದತ್ತ ಪೀಠಕ್ಕೆ ಸಾಗುವ, ಕವಿಕಲ್ ಗಂಡಿ ರಸ್ತೆಯ ಬಳಿ, ಭೂ ಕುಸಿತ ಉಂಟಾಗಿದೆ.

<><><>

ಮಡಿಕೇರಿ, ತಲಕಾವೇರಿ, ಭಾಗಮಂಡಲ ಸೇರಿದಂತೆ, ಕೊಡಗು ಜಿಲ್ಲೆಯಲ್ಲಿ ಧಾರಾಕಾರ ಮಳೆ ಮುಂದುವರೆದಿದೆ. ಭಾಗಮಂಡಲದಲ್ಲಿ, ದಾಖಲೆಯ 168 ಮಿಲ್ಲಿ ಮೀಟರ್ ಮಳೆಯಾಗಿದೆ. ಕೊಡಗು ಜಿಲ್ಲೆಯ ಶಾಲೆ, ಕಾಲೇಜು ಹಾಗೂ ಅಂಗನವಾಡಿ ಕೇಂದ್ರಗಳಿಗೆ, ಇಂದು ಮತ್ತು ನಾಳೆ ರಜೆ ಘೋಷಿಸಲಾಗಿದೆ.

<><><>

ಉಪ ಲೋಕಾಯುಕ್ತ, ನ್ಯಾಯಮೂರ್ತಿ ಬಿ.ವೀರಪ್ಪ, ಇಂದಿನಿಂದ 29ರ ವರೆಗೆ, ಮಂಡ್ಯ ಜಿಲ್ಲೆಯ ಪ್ರವಾಸ ಕೈಗೊಳ್ಳಲಿದ್ದಾರೆ. ತನ್ನಿಮಿತ್ತ, ಜಿಲ್ಲಾಧಿಕಾರಿ ಕುಮಾರ, ನಗರದ ಬಿ.ಆರ್.ಅಂಬೇಡ್ಕರ್ ಭವನಕ್ಕೆ ಭೇಟಿ ನೀಡಿ, ಪೂರ್ವಭಾವಿಯಾಗಿ, ಪರಿಶೀಲಿಸಿದರು. ಉಪ ಲೋಕಾಯುಕ್ತರು ನಿನ್ನೆ ಸಂಜೆ, ಮಂಡ್ಯಕ್ಕೆ ಆಗಮಿಸಿದ್ದು, ನಾಳೆ ಜಿಲ್ಲೆಯ ವಿವಿಧ ಸ್ಥಳಗಳಿಗೆ ಭೇಟಿ ನೀಡಿ, ಪರಿಶೀಲಿಸಲಿದ್ದಾರೆ, ಎಂದು ಜಿಲ್ಲಾಧಿಕಾರಿ ತಿಳಿಸಿದರು.

<><><>

ಅಂತಾರಾಷ್ಟ್ರೀಯ, 'ಬೂಕರ್' ಪ್ರಶಸ್ತಿ ಪಡೆದ, ಬಾನು ಮುಷ್ತಾಕ್ ಅವರ, ಕಥಾ ಸಂಕಲನ, ಹಾರ್ಟ್ ಲ್ಯಾಂಪ್ ಕಥೆ, ಬಿ ಎ ವೂಮನ್ ಓ ಲಾರ್ಡ್, ಬಾನುಲಿ ನಾಟಕದ ರೂಪಾಂತರ, ಒಮ್ಮೆ ಹೆಣ್ಣಾಗು ಪ್ರಭುವೆ ಇಂದು ರಾತ್ರಿ, 9.30ಕ್ಕೆ ರಾಜ್ಯವ್ಯಾಪಿ ಪ್ರಸಾರವಾಗಲಿದೆ. 28 ವರ್ಷಗಳ ಹಿಂದೆ, ಬೆಂಗಳೂರು ಆಕಾಶವಾಣಿ ಕೇಂದ್ರದ ಮೂಲಕ, ಜಾಗತಿಕ ಬಾನುಲಿ ನಾಟಕಗಳ ಪ್ರಸಾರ ಸ್ಪರ್ಧೆಯಲ್ಲಿ, ಈ ನಾಟಕ ಅಂತಾರಾಷ್ಟ್ರೀಯ ಪ್ರಶಸ್ತಿಯನ್ನು ಪಡೆದಿತ್ತು. ಬಾನುಲಿ ನಾಟಕವಾಗಿ ರೂಪಾಂತರಿಸಿದವರು ಜಿ.ಎಂ.ಶಿರಹಟ್ಟಿ.

<><><>

ಉಡುಪಿ–ಚಿಕ್ಕಮಗಳೂರು ಸಂಸದ, ಕೋಟ ಶ್ರೀನಿವಾಸ ಪೂಜಾರಿ, ಬಾನು ಮುಷ್ತಾಕ್ ಹಾಗೂ ದೀಪಾ ಭಾಸ್ತಿ ಅವರನ್ನು, ಅಭಿನಂದಿಸಿದ್ದಾರೆ.

<><><>

ಈಗ ಸಂಕ್ಷಿಪ್ತ ಸುದ್ದಿಗಳು:

<><><>

ಇಂದಿನಿಂದ ಜೂನ್ 2ನೇ ತಾರೀಖಿನ ವರೆಗೆ, ಎಸ್.ಎಸ್.ಎಲ್.ಸಿ. ವಾರ್ಷಿಕ ಪರೀಕ್ಷೆ –2 ರಾಜ್ಯಾದ್ಯಂತ ನಡೆಯಲಿದೆ.

<><><>

ಚಿತ್ರದುರ್ಗ ಜಿಲ್ಲೆಯಲ್ಲಿ, ಶಿಕ್ಷಕರ ಬುನಾದಿ ಸಾಕ್ಷರತೆ ಮತ್ತು ಸಂಖ್ಯಾ ಜ್ಞಾನವನ್ನು ಹೆಚ್ಚಿಸಲು, "ಕಲಿಕಾ ಪರ್ವ" ಎಂಬ ಚಟುವಟಿಕೆ ಕೈಪಿಡಿ ಸಿದ್ಧಪಡಿಸಲಾಗಿದೆ ಎಂದು, ಕ್ಷೇತ್ರ ಶಿಕ್ಷಣಾಧಿಕಾರಿ ಎಸ್.ನಾಗಭೂ ‘ಣ್ ತಿಳಿಸಿದ್ದಾರೆ.

<><><>

ಯಾದಗಿರಿ ಜಿಲ್ಲೆ, ಶಹಾಪುರ ಹೊರವಲಯದ, 64 ನಿವೇಶನಗಳನ್ನು, ಸೂರು ವಂಚಿತ ಬಡ ಜನತೆಗೆ ಶೀಘ್ರ ವಿತರಿಸಲಾಗುವುದು ಎಂದು, ಜಿಲ್ಲಾ ಉಸ್ತುವಾರಿ ಸಚಿವ ಶರಣಬಸಪ್ಪ ದರ್ಶನಾಪುರ ತಿಳಿಸಿದ್ದಾರೆ.

<><><>

ಉತ್ತರಕನ್ನಡ ಜಿಲ್ಲೆಯ, ರಾಷ್ಟ್ರೀಯ ಹಾಗೂ ರಾಜ್ಯ ಹೆದ್ದಾರಿಯ, ಎಲ್ಲ ಸೇತುವೆಗಳ ಸುದೃಢತೆ ಬಗ್ಗೆ, ವರದಿ ನೀಡುವಂತೆ, ಜಿಲ್ಲಾಧಿಕಾರಿ ಕೆ.ಲಕ್ಷ್ಮೀಪ್ರಿಯಾ ಸಂಬಂಧಿತ ಇಲಾಖೆಗಳ ಅಧಿಕಾರಿಗಳಿಗೆ, ಸೂಚಿಸಿದ್ದಾರೆ.

<><><>

ಧಾರವಾಡದ ಶಾಂತಲಾ ನೃತ್ಯಾಲಯದ, ವಿಜೇತಾ ವರ್ಣೇಕರ ಹಾಗೂ ತಂಡ, ಸಹನಾ ಭಟ್ ಅವರ ಕರ್ನಾಟಕ ವೈಭವ ಭರತನಾಟ್ಯವನ್ನು, ಸೃಜನಾ ರಂಗಮಂದಿರದಲ್ಲಿ, ಪ್ರಸ್ತುತಪಡಿಸಿತು.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

<><><>

- ಮನ್ ಕಿ ಬಾತ್; ಜೇನು ಕೃಷಿಯಿಂದ, 'ಆತ್ಮನಿರ್ಭರ ಭಾರತ' ಪರಿಕಲ್ಪನೆ ಸಾಕಾರ, – ಪ್ರಧಾನಮಂತ್ರಿ ನರೇಂದ್ರ ಮೋದಿ, ಆಶಯ.
- ರಾಜ್ಯಾದ್ಯಂತ, ಮುಂಗಾರು ಚುರುಕು; ಡಿ.ಎ.ಪಿ. ಬದಲಿಗೆ, ಸಂಯುಕ್ತ ರಸಗೊಬ್ಬರ ಬಳಸಲು, ರೈತರಿಗೆ ಕೃಷಿ ಇಲಾಖೆ, ಸೂಚನೆ.
- ಬೆಂಗಳೂರಿನ ಹೆಬ್ಬಾಳದಲ್ಲಿ, ಶೀಘ್ರ, ಸಾವಯವ ಮತ್ತು ಸಿರಿಧಾನ್ಯ ಹಬ್ ಸ್ಥಾಪನೆ.

- ಉಪ ಲೋಕಾಯುಕ್ತ ಬಿ.ವೀರಪ್ಪ, ಇಂದಿನಿಂದ 29ರ ವರೆಗೆ, ಮಂಡ್ಯ ಜಿಲ್ಲೆ ಪ್ರವಾಸ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.

<><><>